ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 08-06-1971

***ಜೀವನಕ್ಕೆ ಮೂರು ವಸ್ತುಗಳ ಅವಶ್ಯಕತೆ -ಪೌಷ್ಟಿಕ ಆಹಾರ, ಖುಷಿ ಮತ್ತು ಖಜಾನೆ***

(जीवन के लिए तीन चीजों की आवश्यकता - खुराक, खुशी और खज़ाना)

ಜೀವನದಲ್ಲಿ ಮುಖ್ಯ ಮೂರು ವಸ್ತುಗಳ ಅವಶ್ಯಕತೆಯಿದೆ. ಲೌಕಿಕ ಜೀವನವಿರಲಿ, ಅಲೌಕಿಕ ಜೀವನವಿರಲಿ ಎರಡರಲ್ಲೂ ಮೂರು ವಸ್ತುಗಳ ಅವಶ್ಯಕತೆಯಿದೆ. ಅವು ಯಾವವು? ಒಂದು ಪೌಷ್ಟಿಕ ಆಹಾರ, ಎರಡನೆಯದು ಖುಷಿ ಮತ್ತು ಮೂರನೆಯದು ಖಜಾನೆ. ಈ ಮೂರೂ ಮಾತುಗಳು ಅವಶ್ಯಕವಾಗಿವೆ. ಖಜಾನೆಯಿಲ್ಲದೆ ಏನೂ ಆಗುವುದಿಲ್ಲ, ಖುಷಿಯಿಲ್ಲದೆ ಜೀವನವಿಲ್ಲ ಮತ್ತು ಪೌಷ್ಟಿಕ ಆಹಾರವೂ ಅವಶ್ಯಕ. ಆದ್ದರಿಂದ ಮೂರೂ ವಸ್ತುಗಳು ಇಲ್ಲಿಯೂ ಅವಶ್ಯಕ. ಪೌಷ್ಟಿಕ ಆಹಾರವೆಂದು ಯಾವುದಕ್ಕೆ ಹೇಳಲಾಗುತ್ತದೆ? ಪ್ರಾಪ್ತಿಯ ಖುಷಿಯಾಯಿತು, ಖಜಾನೆ ಯಾವುದು? ಖಜಾನೆಯಾಗಿದೆ ಜ್ಞಾನ ಮತ್ತು ನೆನಪಿನಿಂದ ಯಾವ ಶಕ್ತಿ ತುಂಬುತ್ತದೆಯೋ ಅದಾಗಿದೆ ಪೌಷ್ಟಿಕ ಆಹಾರ. ಜೀವನದ ಶಕ್ತಿಯಾಗಿದೆ ಪೌಷ್ಟಿಕ ಆಹಾರ. ಮೂರೂ ಪ್ರಾಪ್ತಿಗಳು ಆಗಿವೆಯೋ ಅಥವಾ ಆಗುತ್ತಿವೆಯೋ? ಖಜಾನೆಯೂ ಪೂರ್ಣ ಸಿಕ್ಕಿದೆಯಲ್ಲವೇ? ಪೌಷ್ಟಿಕ ಆಹಾರವೂ ಸಿಕ್ಕಿದೆ. ಖುಷಿಯಂತೂ ಇದ್ದೇ ಇದೆ. ಅಖಂಡ ಖಜಾನೆ ಸಿಕ್ಕಿದೆ. ಆ ನಶಿಸದ ಖಜಾನೆಯನ್ನು ಬಹಳ ಸಹಜವಾಗಿ ಯಾರಿಗಾದರೂ ಎಣಿಸಿ ಏನೇನು ಸಿಕ್ಕಿದೆ ಎಂದು ಹೇಳಬಲ್ಲಿರಾ? ಸಹಜ ರೀತಿಯಲ್ಲಿ ಎಲ್ಲಾ ಖಜಾನೆ ಬರುವಂತೆ ಯಾರಿಗಾದರೂ ವರ್ಣನೆ ಮಾಡಿ ಹೇಳಿ. ಸಾಗರವನ್ನು ಮಡಕೆಯಲ್ಲಿ ಸಮಾವೇಶಗೊಳಿಸಿ ತೋರಿಸಿ. ಖಜಾನೆಯ ವರ್ಣನೆಯನ್ನು ಅವಶ್ಯ ಮಾಡಿ ಒಂದು, ಎರಡು, ಮೂರು..." ಇಷ್ಟು ಖಜಾನೆ ನಮ್ಮಲ್ಲಿದೆ ಎಂದು ಈ ರೀತಿ ಎಣಿಸಿ ಹೇಳುತ್ತೀರಲ್ಲವೇ? ಇಲ್ಲಿಯೂ "ಒಂದು, ಎರಡು, ಮೂರು, ನಾಲ್ಕು, ಐದು. ಇದರೊಳಗೆ ಎಲ್ಲಾ ಖಜಾನೆಯನ್ನು ಎಣಿಸಿ ಹೇಳಬಹುದು. "ಒಂದರಲ್ಲಿ ಒಟ್ಟಾಗಿ ಅನೇಕ ಮಾತುಗಳು ಬರುತ್ತವೆ. ಒಬ್ಬ ತಂದೆ, ಒಂದೇ ಜ್ಞಾನ, ಈ ರೀತಿ "ಒಂದರ" ವರ್ಣನೆ ಮಾಡಿ ಅದರಲ್ಲಿ ಅನೇಕ ಜಾನಬಿಂದುಗಳಿವೆ. ಎರಡನ್ನು ವರ್ಣನೆ ಮಾಡಿ ಅದರಲ್ಲಿಯೂ ಎಷ್ಟು ವಿಚಾರಗಳಿವೆ. ಮೂರು ವರ್ಣನೆ ಮಾಡಿ ಆಗಲೂ ಎಷ್ಟು ವಿಚಾರಗಳಿವೆ, ಆದ್ದರಿಂದ ಒಂದು, ಎರಡು, ಮೂರು, ನಾಲ್ಕು, ಐದು - ಇದರಲ್ಲಿಯೇ ಎಲ್ಲಾ ಜ್ಞಾನ ವರ್ಣನೆ ಮಾಡಬಹುದು. ಹೇಗೆ ಖಜಾನೆಗಳನ್ನು ಬೆರಳುಗಳ ಮೇಲೆ ಎಣಿಸುತ್ತಾರಲ್ಲವೇ? ಅದೇ ರೀತಿ ತಾವೂ ಜ್ಞಾನ ಖಜಾನೆಯನ್ನು ಈ ಐದರ ಎಣಿಕೆಯಲ್ಲಿ ವರ್ಣನೆ ಮಾಡಿ ಹೇಳಬಹುದು. ಈ ಕ್ಲಾಸ್ ಮಾಡಿ, ನಂತರ ನೋಡಿ, ಐದರ ಒಳಗೆ ಎಲ್ಲಾ ಜ್ಞಾನದಬಿಂದುಗಳು ಬರುತ್ತವೆ. ಈ ರೀತಿ ಮಂಥನ ಮಾಡಬೇಕು. ಅದರಿಂದ ಸಹಜವೂ ಆಗಬೇಕು ಮತ್ತು ಅದೇ ಜ್ಞಾನ ರಮಣೀಕವಾಗಬೇಕು. ಐದರಲ್ಲಿ ಎಲ್ಲಾ ಜ್ಞಾನವನ್ನು ವರ್ಣನೆ ಮಾಡಿ ಹೇಳಿ. ಖಜಾನೆಗಳನ್ನು ವರ್ಣನೆ ಮಾಡಿ ಹೇಳಲು ಸಹಜ ವಿಧಿಯಿದಾಗಿದೆ. ಚಿಕ್ಕ ಮಕ್ಕಳಿಗೂ ಒಂದು ಎರಡು,ಮೂರು.. ಎಂದು ಕಲಿಸುತ್ತಾರೆ. ಈ ಐದರಲ್ಲಿಯೇ ಎಲ್ಲಾ ಖಜಾನೆಯ ವರ್ಣನೆಯಿರಲಿ, ಎಷ್ಟು ಬಾರಿ ಖಜಾನೆಯ ವರ್ಣನೆ ಮಾಡುತ್ತೀರಿ ಅಥವಾ ಮನನ ಮಾಡುತ್ತೀರಿ ಅಷ್ಟು ಖುಷಿ ಅವಶ್ಯವಾಗಿ ಆಗುತ್ತದೆ. ಖಜಾನೆಯನ್ನು ಮನನ ಮಾಡುವುದರಿಂದ ಮಗ್ನ ಅವಸ್ಥೆ ಸಹಜವಾಗಿ ಆಗುತ್ತದೆ. ಖುಷಿಯೂ ಸಿಗುತ್ತದೆ, ಪೌಷ್ಟಿಕ ಆಹಾರವೂ ಸಿಗುತ್ತದೆ ಮತ್ತು ಖಜಾನೆಯ ಸ್ಮೃತಿಯೂ ಬರುತ್ತದೆ. ಮೂರು ಮಾತುಗಳು ಸ್ಮೃತಿಯಲ್ಲಿದ್ದರೆ ಈ ಜೀವನವನ್ನು ಶ್ರೇಷ್ಠ ಜೀವನವೆಂದು ಹೇಳಲಾಗುತ್ತದೆ.

ನೆನಪಿನ ಯಾತ್ರೆಯಲ್ಲಿರುವುದರಿಂದ ಚಮತ್ಕಾರವಾಗುತ್ತದೆಯೇ? (ಶಕ್ತಿಗಳ ಪ್ರಾಪ್ತಿಯಾಗುತ್ತದೆ), ಶಕ್ತಿಗಳ ಪ್ರಾಪ್ತಿಗೆ ಚಮತ್ಕಾರವೆಂದು ಹೇಳಬಹುದೇ? ಅಲ್ಲಿ ಜನ ಅನೇಕ ಅಭ್ಯಾಸಗಳನ್ನು ಮಾಡಿದಾಗ ಅವರಲ್ಲಿ ರಿದ್ಧಿ-ಸಿದ್ಧಿಯ ಚಮತ್ಕಾರ ಬರುತ್ತದೆ. ಆದರೆ ಈ ಪ್ರಾಪ್ತಿಗೆ ಚಮತ್ಕಾರ ಎನ್ನಬಹುದೇ? ಯಾವ ಶಕ್ತಿಯ ಆಧಾರದಿಂದ ತಾವು ಕರ್ತವ್ಯ ಮಾಡುತ್ತೀರೋ ಅದಕ್ಕೆ ಚಮತ್ಕಾರ ಎನ್ನಬಹುದೇ? (ಚಮತ್ಕಾರ ಎನ್ನುವುದಿಲ್ಲ) ಚಮತ್ಕಾರವೆಂದು ಪ್ರಯೋಗ ಮಾಡುವುದಿಲ್ಲ ಆದರೆ ಕರ್ತವ್ಯವೆಂದು ತಿಳಿದು ಶಕ್ತಿಯ ಪ್ರಯೋಗ ಮಾಡುತ್ತೀರಿ. ಕರ್ತವ್ಯ ಮಾಡುವುದು ಮಾಡಲೇಬೇಕಾದ ಕರ್ಮವಾಗಿದೆ. ಈ ಕಾರಣ ಸ್ವೀಕಾರವಾಗುವುದಿಲ್ಲ. ಇಲ್ಲಿ

ಚಮತ್ಕಾರದ ಮಾತಿಲ್ಲ. ಇದನ್ನು ಶ್ರೀಮತದ ಪ್ರ್ಯಾಕ್ಟಿಕಲ್ ಕರ್ತವ್ಯವೆಂದು ತಿಳಿದು ನಡೆಯುತ್ತೀರಿ. ಆ ಮನುಷ್ಯರ ಬಳಿ ಚಮತ್ಕಾರವಿರುತ್ತದೆ. ತಮ್ಮ ಬುದ್ಧಿಯಲ್ಲಿ ಶ್ರೀಮತ ಬರುತ್ತದೆ. ಶ್ರೀಮತ ಮತ್ತು ಚಮತ್ಕಾರದಲ್ಲಿ ಅಂತರವಿದೆ. ತಮಗೆ ಶಕ್ತಿಗಳು ಪ್ರಾಪ್ತಿಯಾಗುವವು ಆಗ ಸ್ಥಿತಿ ಬರುವುದು – ಶ್ರೀಮತದಿಂದ ಅಥವಾ ಈ ಮತದಿಂದ ಈ ಗತಿ ಪ್ರಾಪ್ತಿಯಾಗಿದೆ. ಚಮತ್ಕಾರವಲ್ಲ ಆದರೆ ಶ್ರೀಮತ ಎಂದು ತಿಳಿಯುತ್ತೀರಿ, ಶ್ರೀಮತ ಎಂದು ಶಕ್ತಿಗಳ ಪ್ರಯೋಗ ಮಾಡುವುದಿಲ್ಲ, ಕರ್ತವ್ಯವೆಂದು ತಿಳಿದು ಶಕ್ತಿಗಳ ಪ್ರಯೋಗ ಮಾಡುವಿರಿ. ಶಕ್ತಿಗಳು ಬರುವುದು ಅವಶ್ಯಕ, ಮುಖದಿಂದ ಹೇಳುವ ಅವಶ್ಯಕತೆಯಿಲ್ಲ, ಸಂಕಲ್ಪದಿಂದ ಕರ್ತವ್ಯ ಸಿದ್ಧ ಮಾಡುವರು. ಮುಖದಿಂದ ಕರ್ತವ್ಯ ಸಿದ್ಧ ಮಾಡುವ ಅಭ್ಯಾಸದಲ್ಲಿಯೂ ಮೊದಲು ತಾವು ಹೆಚ್ಚು ಹೇಳಬೇಕಾಗುತ್ತಿತ್ತು, ಆಗ ಸಿದ್ಧಿಯಾಗುತ್ತಿತ್ತು. ಈಗ ಕಡಿಮೆ ಹೇಳುವುದರಿಂದಲೂ ಕಾರ್ಯವಾಗುತ್ತದೆ. ತಮ್ಮ ಸಂಕಲ್ಪವು ಕರ್ತವ್ಯವನ್ನು ಪೂರ್ಣ ಮಾಡುವುದು, ಸಂಕಲ್ಪದಿಂದ ಯಾರನ್ನಾದರೂ ಕರೆಯಬಹುದು. ಯಾರಿಗಾದರೂ ಸಂಕಲ್ಪದಿಂದ ಕಾರ್ಯದ ಪ್ರೇರಣೆ ಕೊಡಬಹುದು. ಇವೂ ಶಕ್ತಿಗಳಾಗಿವೆ ಆದರೆ ಅವುಗಳನ್ನು ಕರ್ತವ್ಯವೆಂದು ತಿಳಿದು ಪ್ರಯೋಗ ಮಾಡಬೇಕು. ಈ ಪ್ರಾಪ್ತಿ ಶ್ರೀಮತದಿಂದ ಆಯಿತು. ಸ್ವಿಚ್ ಹಾಕುವುದರಿಂದ ದೂರದರ್ಶನದಲ್ಲಿ ಎಲ್ಲಾ ದೃಶ್ಯಗಳು ಬರುವಂತೆ ತಾವು ಸಂಕಲ್ಪ ಇಲ್ಲಿ ಮಾಡುವಿರಿ. ಅಲ್ಲಿ ಅವರ ಬುದ್ಧಿಯಲ್ಲಿ ಸ್ಪಷ್ಟ ಚಿತ್ರ ಮೂಡುವುದು. ಈ ರೀತಿಯ ಸಂಬಂಧವಿರುವುದು. ಈ ಎಲ್ಲಾ ಶಕ್ತಿಗಳ ಪ್ರಾಪ್ತಿಯಿರುವುದು. ಈ ಪ್ರಾಪ್ತಿಗಾಗಿ ಬುದ್ಧಿಯಲ್ಲಿ ಎಲ್ಲಾ ಮಾತುಗಳು ಸಮಾಪ್ತಿಯಾಗಿ ಕೇವಲ ದೊರೆತ ಶ್ರೀಮತದ ಆಜ್ಞೆಯೇ ನಡೆಯಬೇಕು ಮತ್ತೇನೂ ಮಿಶ್ರಣವಾಗಿರಬಾರದು. ವ್ಯರ್ಥ ಸಂಕಲ್ಪ ಶ್ರೀಮತವಲ್ಲ, ಇದು ತಮ್ಮ ಮನ್ಮತ, ಶ್ರೀಮತದ ಹೊರತು ಬೇರೆ ಇನ್ನೇನೂ ಮಿಶ್ರಣವಾಗದಿರುವ ಬುದ್ಧಿಯಾದರೆ ಶಕ್ತಿಗಳು ಬರುವವು. ಸಮೀಪ ಬರುತ್ತಿರುವಿರಿ. ಶಕ್ತಿಯರ ಗಾಯನ ಹೆಚ್ಚಿದೆ. ಕರ್ತವ್ಯದ ಸಂಬಂಧದಲ್ಲಿ ಶಕ್ತಿಯರ ಗಾಯನ ಹೆಚ್ಚಿದೆ ಏಕೆಂದರೆ ಸಾಕಾರದಲ್ಲಿ ಅಂತಿಮ ಕರ್ತವ್ಯದ ಸಮಾಪ್ತಿ ಶಕ್ತಿಯರಿಂದ ಇದೆ. ಆದ್ದರಿಂದ ಕರ್ತವ್ಯದ ಸ್ಮೃತಿ ಅಥವಾ ಸ್ಮೃತಿಚಿಹ್ನೆ ಸಹ ಶಕ್ತಿಯರದು ಜಾಸ್ತಿಯಿದೆ. ದಿನದಿನಕ್ಕೆ ಭವಿಷ್ಯದಲ್ಲಿ ದೇವತೆಗಳ ಸ್ವರೂಪದ ಪೂಜೆ ಅಥವಾ ಸ್ಮೃತಿಚಿಹ್ನೆ ಕಡಿಮೆಯಾಗುವುದು ಶಕ್ತಿಯರ ಪೂಜೆ, ಗಾಯನ ಹೆಚ್ಚಾಗುವುದು. ಗಾಯನವಾಗುತ್ತಾ ಪ್ರತ್ಯಕ್ಷವಾಗುವಿರಿ. ಒಳ್ಳೆಯದು.

**(ನಿರ್ಮಲ ಶಾಂತಾ ದಾದಿ ಬಾಪ್ ದಾದಾರ ಸಮ್ಮುಖದಲ್ಲಿ ಕುಳಿತಿರುವರು)**

ಕಲ್ಕತ್ತಾದಲ್ಲಿ ಸೇವೆಯ ಸಾಧನವನ್ನು ಸ್ಥಾಪನೆ ಮಾಡಿದಿರಿ, ಆದರೆ ಹೇಗೆ ಸೇವೆಯ ಸಾಧನದ ಸ್ಥಾಪನೆ ಮಾಡಿರುವಿರೋ ಹಾಗೆ ಪಾಲನೆಯ ರೂಪ ಇನ್ನೂ ವಿಸ್ತಾರ ಹೊಂದಬೇಕು. ಕಲಕತ್ತೆಯಲ್ಲಿ ಸಂಗ್ರಹಾಲಯದಿಂದ ಎಲ್ಲಾ ಆತ್ಮರಿಗೆ ಶಾಂತಿಯ ವರದಾನ ಪ್ರಾಪ್ತಿಯಾಗಬೇಕು ಏಕೆಂದರೆ ಕಲಕತ್ತೆಯಲ್ಲಿ ಅಶಾಂತಿ ಜಾಸ್ತಿಯಿದೆಯಲ್ಲವೇ? ಈ ಸ್ಥಾನದಿಂದ ಶಾಂತಿ ಸಹಜ ಪ್ರಾಪ್ತಿಯಾಗುವುದು ಎಂದು ಸರಕಾರದವರೆಗೆ ಧ್ವನಿ ಹೋಗುವಷ್ಟು ಪ್ರಚಾರವಾಗಬೇಕು. ಜೈಲುಗಳಲ್ಲಿ ಹೇಗೆ ಭಾಷಣ ಕೊಡುವರೋ ಹಾಗೆ ಸರಕಾರದಿಂದ ಶಾಂತಿದಳದ ರೂಪದಲ್ಲಿ ನಿಮಂತ್ರಣ ಕೊಡಲಾಗುವುದು ಏಕೆಂದರೆ ಪಾಪಾತ್ಮರನ್ನು ಪುಣ್ಯಾತ್ಮರನ್ನಾಗಿ ಮಾಡುವ ಸಾಧನವಾಗಿದೆ. ಎಲ್ಲಿಯಾದರೂ ಅಶಾಂತಿಯಿದ್ದರೆ ಈ ಶಕ್ತಿದಳ, ಶಾಂತಿದಳ ರಕ್ಷಣೆಗೆ ಸಾಧನವೆಂದು ತಿಳಿಯುವರು. ಈ ರೀತಿ ಸರಕಾರದಿಂದ ಸಿಕ್ಕಾಗ ಪ್ರಶಂಸೆ ಮಾಡಲಾಗುವುದು, ನಾಲ್ಕೂ ಕಡೆಗೂ ಪ್ರಚಾರವಾಗುವಂತೆ ಈ ರೀತಿ ಯೋಜನೆ ಮಾಡಿ, ಅಶಾಂತಿಯ ಮಧ್ಯ ಈ ಶಾಂತಿದಳ ಸುರಕ್ಷೆಯ ಸಾಧನವಾಗಿದೆ ಎಂದು ನಾಲ್ಕೂ ಕಡೆಗಳಲ್ಲಿ ನೀವು ಪ್ರಸಿದ್ಧರಾಗುವಿರಿ, ಭಟ್ಟಿಯ ಕಾರ್ಯಕ್ರಮಗಳ ಗಾಯನವಿದೆ. ಬೆಂಕಿ ಉರಿಯುತ್ತಿದ್ದರೂ ಆ ಸ್ಥಾನ ಸುರಕ್ಷೆಯ ಸಾಧನವಾಯಿತು, ನಾಲ್ಕೂ ಕಡೆ ಬೆಂಕಿಯಿರುವುದು ಆದರೆ ಈ ಒಂದೇ ಸ್ಥಾನ ಶಾಂತಿಯದಾಗಿದೆ ಎಂದು ಅನುಭವ ಮಾಡುವರು. ಇದೇ ಸ್ಥಾನದಿಂದಲೇ ನಮಗೆ ಸುರಕ್ಷೆ ಅಥವಾ ಶಾಂತಿ ಸಿಗುವುದು. ಯಾವುದಾದರೂ ಒಂದು ಸ್ಥಾನವನ್ನು ವಿಶೇಷ ಯೋಗ ಅಭ್ಯಾಸಕ್ಕೆ ಮಾಡಿ, ಅಲ್ಲಿ ಹೋಗುತ್ತಲೇ ನಾವು ಎಲ್ಲಿಗೆ ಬಂದಿದ್ದೇವೆ ಎಂದು ಗೊತ್ತಾಗುತ್ತಿಲ್ಲ ಎಂದು ಅನುಭವ ಮಾಡಿದಾಗಲೇ ಈ ಪಾಲನೆಯ ಕರ್ತವ್ಯ ಹೆಚ್ಚಾಗುವುದು. ಸ್ಥಾನವೂ ಅವಸ್ಥೆಯನ್ನು ಹೆಚ್ಚಿಸುತ್ತದೆ. ಮಧುಬನದ ಸ್ಥಾನವೇ ಸ್ಥಿತಿಯನ್ನು ಹೆಚ್ಚಿಸುತ್ತದೆ. ಆದ್ದರಿಂದ ಯಾವುದೇ ಆತ್ಮವಾಗಿರಲಿ ಎಂದಾದರೂ ನೋವು - ದುಃಖ, ಚಿಂತೆಯಲ್ಲಿ

ಮುಳುಗಿರಲಿ ನಾವು ಎಲ್ಲಿಗೆ ಬಂದಿದ್ದೇವೆ ಎಂದು ಅಲ್ಲಿ ಬರುತ್ತಲೇ ಅನುಭವ ಮಾಡಬೇಕು. ಇಂತಹ ಯಾವುದಾದರೂ ಸ್ಥಾನವನ್ನು ಮಾಡಿ. ಇಂತಹ ಸ್ಥಾನಕ್ಕೆ ಯೋಜನೆ ಮಾಡಿ. ತಮ್ಮನ್ನು ಸಫಲತೆಯ ಮೂರ್ತಿ ಎಂದು ತಿಳಿಯುತ್ತೀರಾ? ಯಾವ ಮುಖ್ಯ ಧಾರಣೆ ಮಾಡುವುದರಿಂದ ಸಫಲತೆಯ ಮೂರ್ತಿಯಾಗುವಿರಿ? ಸಹನಶೀಲತೆ, ಸಹನಶೀಲತೆ ಮತ್ತು ಸರಳತೆ ಯಾವುದೇ ಕಾರ್ಯವನ್ನು ಸಫಲ ಮಾಡುವವು. ತಾಳ್ಮೆಯಿರುವ ಮನುಷ್ಯ ವಿಚಾರ ಮಾಡಿ ಕಾರ್ಯ ಮಾಡುವನು. ಆಗ ಸಫಲತೆ ಪ್ರಾಪ್ತಿಯಾಗುವುದು. ಅದೇ ರೀತಿ ಸಹನಶೀಲ ವ್ಯಕ್ತಿ ಕಠಿಣ ಸಂಸ್ಕಾರದ ವ್ಯಕ್ತಿಯಿದ್ದರೂ, ಎಷ್ಟೇ ಕಠಿಣ ಕಾರ್ಯವಿದ್ದರೂ ಅವುಗಳನ್ನು ಶೀತಲ ಮಾಡುತ್ತಾನೆ ಅಥವಾ ಸಹಜ ಮಾಡುತ್ತಾನೆ. ಸಹನಶೀಲತೆಯ ಗುಣ ಯಾರಲ್ಲಿರುವುದೋ ಅವರು ಗಂಭೀರವಾಗಿರುವರು. ಗಂಭೀರವಾಗಿರುವವರು ಆಳಕ್ಕೆ ಹೋಗುವವರಾಗಿರುತ್ತಾರೆ. ಅಂತಹವರು ಯಾವುದೇ ಕಾರ್ಯದಲ್ಲಿ ಎಂದೂ ಭಯ ಪಡುವುದಿಲ್ಲ. ಆಳಕ್ಕೆ ಹೋಗಿ ಸಫಲತೆ ಪಡೆದುಕೊಳ್ಳುತ್ತಾರೆ. ಸಹನಶೀಲರು ಬಾಹ್ಯಮುಖತೆಯ ಪ್ರಕಂಪನಗಳನ್ನಷ್ಟೇ ಅಲ್ಲ ಆದರೆ ಮನದಲ್ಲಿ ಉತ್ಪನ್ನವಾಗುವ ಸಂಕಲ್ಪಗಳ ಉತ್ಪತ್ತಿಯನ್ನು ನೋಡಿ ಭಯ ಪಡುವುದಿಲ್ಲ. ತಮ್ಮ ಸಹನಶೀಲತೆಯಿಂದ ಎದುರಿಸುವರು ಮತ್ತು ಸಹನಶೀಲತೆಯ ಗುಣವಿರುವವರ ಮುಖದಿಂದ ಏನು ಕಂಡುಬರುತ್ತದೆ? ಸಂತುಷ್ಟತೆ ಕಂಡುಬರುತ್ತದೆ. ಅವರ ಹಾವ- ಭಾವಗಳಿಂದ ಎಂದೂ ಅಸಂತುಷ್ಟತೆ ಕಂಡು ಬರುವುದಿಲ್ಲ. ಯಾರು ಸ್ವಯಂ ಸಂತುಷ್ಟಮೂರ್ತಿ ಆಗಿರುತ್ತಾರೋ ಅವರು ಬೇರೆಯವರನ್ನು ಸಂತುಷ್ಟ ಮಾಡುವರು. ಓಡಾಡುತ್ತ ಅವರು ಫರಿಶ್ತೆನಂತೆ ಅನುಭವವಾಗುವರು. ಸಹನಶೀಲತೆ ಬಹಳ ಮುಖ್ಯ ಧಾರಣೆಯಾಗಿದೆ. ಎಷ್ಟು ಸಹನಶೀಲರೋ ಅಷ್ಟು ಸ್ವಯಂ ಸಂತುಷ್ಟ, ಅನ್ಯರೂ ಸಂತುಷ್ಟ. ಸಂತುಷ್ಟರಾಗುವುದು ಎಂದರೆ ಸಫಲತೆ ಪಡೆಯುವುದು. ಯಾವುದೇ ಮಾತನ್ನು ಸಹನೆ ಮಾಡುವುದು ಎಂದರೆ ಅದರ ಆಳಕ್ಕೆ ಹೋದಂತೆ. ಸಾಗರದ ಆಳಕ್ಕೆ ಹೋದರೆ ಅಲ್ಲಿಂದ ರತ್ನಗಳನ್ನು ತೆಗೆದುಕೊಂಡು ಬರುತ್ತಾರೆ. ಅದೇ ರೀತಿ ಸಹನಶೀಲರಾಗಿರುವವರು ಆಳಕ್ಕೆ ಹೋಗುತ್ತಾರೆ, ಆ ಆಳದಿಂದ ಬಹಳ ಶಕ್ತಿಗಳ ಪ್ರಾಪ್ತಿಯಾಗುತ್ತದೆ. ಸಹನಶೀಲರೇ ಮನನ ಶಕ್ತಿಯನ್ನು ಪ್ರಾಪ್ತಿಕೊಳ್ಳುವರು. ಸಹನಶೀಲರು ಒಳಗೊಳಗೇ ತಮ್ಮ ಮನನದಲ್ಲಿ ತತ್ಪರರಾಗಿರುತ್ತಾರೆ ಮತ್ತು ಅವರೇ ಮಗ್ನರಾಗಿರುತ್ತಾರೆ. ಆದ್ದರಿಂದ ಸಹನಶೀಲತೆ ಬಹಳ ಆವಶ್ಯಕವಾಗಿದೆ. ಅವರ ಮುಖವೇ ಗುಣಮೂರ್ತಿಯಾಗುವುದು, ಸಹನಶೀಲತೆಯ ಧಾರಣೆಯ ಮೇಲೆ ಇಷ್ಟು ಗಮನವಿಟ್ಟುಕೊಳ್ಳಬೇಕು. ಸಹನಶೀಲತೆಯೇ ಡ್ರಾಮಾದ ಗುರಾಣಿಯ ಮೇಲೆ ನಿಲ್ಲುವುದು. ಸಹನಶೀಲತೆಯಿಲ್ಲದಿದ್ದರೆ ಡ್ರಾಮಾದ ಗುರಾಣಿಯನ್ನು ಹಿಡಿಯುವುದು ಕಷ್ಟವಾಗುತ್ತದೆ. ಸಹನೆಯಿರುವವನು ಸಾಕ್ಷಿಯಾಗಬಲ್ಲ ಮತ್ತು ಡ್ರಾಮಾದ ಗುರಾಣಿಯನ್ನು ಹಿಡಿಯಬಲ್ಲ. ಇಷ್ಟು ಗಮನ ಇದರ ಮೇಲಿದೆಯಾ? ಸದಾ ಯಾವುದಾದರೂ ಗುಣವನ್ನು ನೋಡಿ ಅದರ ಆಳಕ್ಕೆ ಹೋಗಿ. ಎಷ್ಟೆಷ್ಟು ಆಳಕ್ಕೆ ಹೋಗುವಿರೋ ಅಷ್ಟು ಗುಣದ ಬೆಲೆ ಗೊತ್ತಾಗುತ್ತದೆ ಮತ್ತು ಎಷ್ಟು ಯಾವ ವಸ್ತುವಿನ ಬೆಲೆ ಗೊತ್ತಾಗುವುದೋ ಅಷ್ಟು ಪ್ರತಿಯೊಂದು ಗುಣವನ್ನು ಗ್ರಹಣ ಮಾಡುವುದು ಅಥವಾ ವರ್ಣನೆ ಮಾಡುವುದು ಸಹಜ. ಆದರೆ ಒಂದೊಂದು ಗುಣದ ಆಳ ಎಷ್ಟಿದೆ ಎಂದು ತಿಳಿದಿರುವವರೇ ಬೆಲೆಬಾಳುವಂತಹವರು ಆಗುವರು. ಅವರದೇ ಗಾಯನ ಸರ್ವಗುಣ ಸಂಪನ್ನ ಎಂದು ಆಗುತ್ತದೆ ಎಂದರೆ ಗುಣಗಳ ಆಧಾರದಿಂದಲೇ ಇಷ್ಟು ಬೆಲೆಯಿದೆ. ಗುಣಗಳ ಆಧಾರದಿಂದ ಇಷ್ಟು ಬೆಳೆಬಾಳುವವರು ಆ ಒಂದೊಂದು ಗುಣದ ಬೆಲೆ ಎಷ್ಟಿರಬಹುದು? ಈ ರೀತಿ ಆಳಕ್ಕೆ ಹೋಗಬೇಕು ಮತ್ತು ಎಷ್ಟು ಸ್ವಯಂನ ಬೆಲೆ ಗೊತ್ತಾಗುವುದೋ ಅಷ್ಟೇ ಬೇರೆಯವರಿಗೆ ಅಷ್ಟು ಬೆಲೆಕೊಟ್ಟು ಹೇಳುವಿರಿ. ತಮ್ಮನ್ನು ಬೆಳೆಬಾಳುವವರ ಲಿಸ್ಟನಲ್ಲಿರುವವರು ಎಂದು ತಿಳಿಯುತ್ತೀರಾ? ಬೆಳೆಬಾಳುವಂತಹವರ ಮುಖ್ಯ ಲಕ್ಷಣವೇನು? ಬಾಪ್ ದಾದಾರಿಗೆ ಹೇಗೆ ತ್ರಿಮೂರ್ತಿ ಎಂದು ಹೇಳುತ್ತಾರೋ ಹಾಗೆ ಒಬ್ಬೊಬ್ಬರ ಒಂದು ಮೂರ್ತಿಯಿಂದ ಮೂರು ಮೂರ್ತಿಗಳ ಸಾಕ್ಷಾತ್ಕಾರವಾಗುತ್ತದೆ. ತಂದೆ ಮೂರು ದೇವತೆಗಳ ರಚಯಿತನಾಗಿರುವುದರಿಂದ ತ್ರಿಮೂರ್ತಿ ಎನಿಸಿಕೊಳ್ಳುತ್ತಾರೆ. ಆದರೆ ತಮ್ಮಿಂದ ಮೂರು ಮೂರ್ತಿಗಳ ಸಾಕ್ಷಾತ್ಕಾರ ಆಗುತ್ತದೆಯೇ? ತಮ್ಮಿಂದ ಈಗ ಮೂರು ಕರ್ತವ್ಯಗಳು ಆಗುತ್ತವೆ. ಕೆಲವು ಆತ್ಮರಲ್ಲಿ ದೈವೀ ಸಂಸ್ಕಾರದ ರಚನೆ ಅಥವಾ ಸ್ಥಾಪನೆ ಮಾಡುವಿರಿ. ಈ ಸ್ಥಾಪನೆಯ ಕಾರ್ಯವನ್ನೂ ಮಾಡುತ್ತೀರಿ. ಕೆಲವು ಆತ್ಮರ ಸಂಸ್ಕಾರ ಸ್ವಲ್ಪ ನಿರ್ಬಲವಾಗಿವೆ. ತಮ್ಮ ಸಂಸ್ಕಾರಗಳ ಪರಿವರ್ತನೆ ಮಾಡಿಕೊಳ್ಳಲಾರರು ಅಥವಾ ತಮ್ಮ ಸಂಸ್ಕಾರಗಳನ್ನು ಸೇವೆಯಲ್ಲಿ ತೊಡಗಿಸಲಾರರು, ಅವರಿಗೆ ಸಹಯೋಗ ಕೊಟ್ಟು ಮುಂದುವರೆಸುವುದಾಗಿದೆ ಪಾಲನೆ, ಪಾಲನೆಯಲ್ಲಿ

ಚಿಕ್ಕದನ್ನು ದೊಡ್ಡದು ಮಾಡುವುದಾಗಿದೆ. ಕೆಲವು ಆತ್ಮಗರು ತಮ್ಮ ಶಕ್ತಿಯಿಂದ ಹಳೆಯ ಸಂಸ್ಕಾರಗಳನ್ನು ಅಳಿಸಲಾರರು, ಅವರಿಗೂ ಸಹಯೋಗಿಗಳಾಗಿ ಅವರ ಕರ್ಮಗಳನ್ನು ನಾಶ ಮಾಡಲು ಸಹಯೋಗಿ ಆಗುತ್ತೀರಿ. ಈ ಮೂರೂ ಕರ್ತವ್ಯ ನಡೆದಿವೆ. ಈ ಮೂರೂ ಕರ್ತವ್ಯಕ್ಕೆ ಮೂರು ಮೂರ್ತಿಗಳಾವವು? ಯಾವ ಸಮಯದಲ್ಲಿ ಯಾವುದೇ ಆತ್ಮನಲ್ಲಿ ಹೊಸ ದೈವಿ ಸಂಸ್ಕಾರಗಳನ್ನು ರಚನೆ ಮಾಡಿಸುತ್ತೀರೋ ಆ ಸಮಯದಲ್ಲಿ ಜ್ಞಾನಮೂರ್ತಿಯಾಗುತ್ತೀರಿ. ಯಾವ ಸಮಯ ಪಾಲನೆ ಮಾಡುತ್ತೀರೋ ಆಗ ದಯೆ ಮತ್ತು ಸ್ನೇಹ ಎರಡೂ ಮೂರ್ತಿಯ ಅವಶ್ಯಕತೆಯಿದೆ. ದಯೆ ಬರದಿದ್ದರೆ ಸ್ನೇಹವೂ ಇರುವುದಿಲ್ಲ. ಆದ್ದರಿಂದ ಪಾಲನೆಯ ಸಮಯ ಒಂದು ದಯಾಹೃದಯಿ ಮತ್ತು ಸ್ನೇಹಮೂರ್ತಿ, ಯಾವ ಸಮಯ ಯಾರದೇ ಹಳೆಯ ಸಂಸ್ಕಾರಗಳ ನಾಶಮಾಡಿಸುವಿರೋ ಆ ಸಮಯ ಶಕ್ತಿ-ಸ್ವರೂಪ ಮತ್ತು ಎರಡನೆಯದು ದರ್ಪದ ಬದಲು ಆತಿಕ ನಶೆಯಲ್ಲಿರುವಿರಿ. ಎಲ್ಲಿಯವರೆಗೆ ಆತ್ಮಿಕ ನಶೆಯಲ್ಲಿರುವುದಿಲ್ಲವೋ ಅಲ್ಲಿಯವರೆಗೆ ಅವರ ವಿಕರ್ಮಗಳ ವಿನಾಶ ಮಾಡಿಸಲಾರಿರಿ. ಹೇಗೆ ಅಜ್ಞಾನ-ಕಾಲದಲ್ಲಿ ಕೆಟ್ಟದ್ದನ್ನು ಬಿಡಿಸಲು ದರ್ಪ ಮಾಡಲಾಗುತ್ತಿತ್ತು. ಇಲ್ಲಿ ದರ್ಪವಿಲ್ಲ ಆದರೆ ಆತ್ಮಿಕ ನಶೆಯಲ್ಲಿರಬೇಕಾಗುತ್ತದೆ ಇಲ್ಲದಿದ್ದರೆ ಅವರ ಹಳೆಯ ಸಂಸ್ಕಾರಗಳನ್ನು ನಾಶ ಮಾಡಿಸಲಾರಿರಿ. ಶಕ್ತಿ ರೂಪದಲ್ಲಿ ವಿಶೇಷ ಈ ನಶೆಯ ಧಾರಣೆ ಮಾಡುತ್ತೀರಿ. ಈ ಗುಣಗಳಿಂದ ಈ ಮೂರೂ ಕರ್ತವ್ಯ ಮಾಡುತ್ತೀರಿ. ಯಾರಲ್ಲಿಯಾದರೂ ಆತ್ಮಿಕ ನಡೆ ಕಡಿಮೆಯಿದ್ದರೆ ಪಾಲನೆ ಮಾಡಬಲ್ಲಿರಿ. ಆದರೆ ಅವರ ಸಂಸ್ಕಾರಗಳನ್ನು ನಾಶ ಮಾಡಲಾರಿರಿ. ಕೇವಲ ದಯೆ ಮತ್ತು ಸ್ನೇಹವಿದ್ದರೆ ವಿನಾಶ ಮಾಡಿಸುವ ಕರ್ತವ್ಯವಲ್ಲ. ಸ್ನೇಹ, ದಯೆ ಇಲ್ಲವಾದರೆ ಪಾಲನೆಯ ಕರ್ತವ್ಯವಿಲ್ಲ. ನಶೆ ಜಾಸ್ತಿಯಿದೆ ಆದರೆ ದಯೆ ಕಡಿಮೆಯಿದ್ದರೆ ಪಾಲನೆಯಲ್ಲಿ ಅಷ್ಟು ಸಹಯೋಗಿಗಳಲ್ಲ, ಆದರೆ ಯಾರದೇ ವಿಕರ್ಮಗಳನ್ನು ನಾಶಮಾಡಿಸುವಲ್ಲಿ ಸಹಯೋಗಿಯಾಗಿದ್ದೀರಿ. ಮತ್ತು ಜ್ಞಾನಪೂರ್ಣರಿಲ್ಲದಿದ್ದರೆ ಹೊಸ ಸಂಸ್ಕಾರಗಳ ರಚನೆಯನ್ನು ಮಾಡಿಸಲಾರಿರಿ. ಕೆಲವರಲ್ಲಿ ಕೆಲವು ವಿಶೇಷ ಗುಣವಿದೆ, ಕೆಲವರಲ್ಲಿ ಮತ್ತೆ ಕೆಲವು ವಿಶೇಷ ಗುಣವಿದೆ. ಆದರೆ ಮೂರೂ ಬೇಕು. ಮೂರರಲ್ಲಿಯೂ ಪ್ರಾಕ್ಟಿಕಲ್ ನಲ್ಲಿ ಸಮಾನತೆಯಿದ್ದರೆ ಸಫಲತೆ ಬಹಳ ಬೇಗನೇ ಸಿಗುತ್ತದೆ ಇಲ್ಲವಾದರೆ ಯಾವುದಾದರೂ ಮಾತಿನ ಕೊರತೆಯಿರುವ ಕಾರಣ ಸಂಪೂರ್ಣ ಸಫಲತೆ ಮತ್ತು ಬೇಗನೇ ಆಗುವದರಲ್ಲಿ ಸಮಯ ಹಿಡಿಯುತ್ತದೆ. ಹಾಗಾದರೆ ಈಗ ಮೂರೂ ಕರ್ತವ್ಯಗಳನ್ನು ಮಾಡಲು ಮುಖ್ಯವಾಗಿ ಗುಣಮೂರ್ತಿಯಾಗಬೇಕೆಂಬ ಗುರಿಯನ್ನಿಟ್ಟುಕೊಳ್ಳಿ, ಅದರಲ್ಲಿ ಕೊರತೆ ಬೇಡ ನಂತರ ಸಮಯವನ್ನು ಸಮೀಪ ತರುವಿರಿ, ತಂದೆಯಲ್ಲಿರುವ ಸರ್ವ ಗುಣಗಳ ಸಮಾನತೆಯೇನಿದೆಯೋ ಅದನ್ನು ತರಬೇಕು, ಈಗ ಕೆಲವರಲ್ಲಿ ಕೆಲವು ಗುಣ ಕೆಲವರಲ್ಲಿ ಕೆಲವು ವಿಶೇಷತೆಗಳಿವೆ, ಅಂತರವಿದೆಯಲ್ಲವೇ? ಬಾಪ್ ದಾದಾ ಯಾವ ಉಡುಗೊರೆಯನ್ನು ಕೊಡಲು ಬಂದಿರುವರು? ನಿರಾಕಾರ ತಂದೆಯ ಉಡುಗೊರೆ ಏನಾಗಿದೆ ಮತ್ತು ಸಾಕಾರನ ಉಡುಗೊರೆ ಯಾವುದು? ಎರಡೂ ಉಡುಗೊರೆ ಸಿಕ್ಕಿವೆಯೇ? ಇಬ್ಬರ ಉಡುಗೊರೆ ಒಂದೇ ಇದೆಯಾ ಅಥವಾ ಬೇರೆ-ಬೇರೆಯಾಗಿದೆಯಾ? ಉಡುಗೊರೆ ಎಲ್ಲರಿಗೂ ಸಿಕ್ಕಿದೆ. ತಂದೆ ಮತ್ತು ದಾದಾರಿಂದ ಉಡುಗೊರೆ ಸಿಗುತ್ತದೆ. ಸರ್ವ ಆತ್ಮರ ಪ್ರತಿ ರಾಜ್ಯಭಾಗ್ಯದ ಯಾವ ಉಡುಗೊರೆಯಿದೆಯೋ ಅದು ಎಲ್ಲರಿಗೂ ಸಿಗುತ್ತದೆ ಆದರೆ ಅನನ್ಯ, ಸ್ನೇಹಿ ಮಕ್ಕಳಿಗೆ ಅಥವಾ ಸರ್ವಕಾರ್ಯದಲ್ಲಿ ಸಹಯೋಗಿಯಾಗುವವರಿಗೆ ಇಬ್ಬರಿಂದಲೂ ಬೇರೆಬೇರೆ ಉಡುಗೊರೆ ಸಿಗುತ್ತದೆ. ಸಾಕಾರ ಬಾಪ್ ದಾದಾರಿಂದ ಸ್ನೇಹಿ ಮತ್ತು ಸಹಯೋಗಿ ರತ್ನಗಳಿಗೆ ಯಾವ ಒಂದು ವಿಶೇಷ ಉಡುಗೊರೆ ಸಿಗುತ್ತದೆ? ಸ್ವರ್ಗದ ಉಡುಗೊರೆಯಂತೂ ವರದಾನದಲ್ಲಿ ಸಿಗುತ್ತದೆ. ಸಾಕಾರ ಮತ್ತು ನಿರಾಕಾರ ತಂದೆಯಿಂದ ಪ್ರತಿಯೊಬ್ಬರಿಗೂ ವಿಶೇಷ ವರದಾನವೂ ಸಿಕ್ಕಿದೆ ಮತ್ತು ಉಡುಗೊರೆಯೂ ಸಿಕ್ಕಿದೆ. ಅನೇಕರಿಗೆ ಈ ರೀತಿಯ ವರದಾನಗಳು ಅವರವರಿಗೆ ಸಿಕ್ಕಿವೆ. ಆ ಕಾರಣ ಪರಿಶ್ರಮವಿಲ್ಲದೇ ವರದಾನದಿಂದ ಸಫಲತೆಯನ್ನು ಪಡೆಯುತ್ತಿರುತ್ತಾರೆ. ತಮ್ಮ ತಮ್ಮ ವರದಾನವನ್ನು ತಿಳಿದಿದ್ದೀರಿ. ಕೆಲವರಿಗೆ ವಿಶೇಷ ಶಕ್ತಿಯ ವರದಾನ ಸಿಕ್ಕಿದೆ, ಕೆಲವರಿಗೆ ಇನ್ನು ಬೇರೆ ವಿಶೇಷ ಶಕ್ತಿಯ ವರದಾನ ಸಿಕ್ಕಿರುವುದು. ಆ ವರದಾನಗಳ ಅನುಭವವನ್ನು ಪ್ರತಿಯೊಬ್ಬರೂ ಮಾಡುತ್ತೀರಿ. ಕೆಲವರಿಗೆ ಸರ್ವರ ಸದಾ ಸಹಯೋಗಿಯಾಗುವ ವರದಾನ ಸಿಕ್ಕಿದೆ, ಇನ್ನೂ ಕೆಲವರಿಗೆ ಸರ್ವರ ಸ್ನೇಹಿಯಾಗುವ ವರದಾನ ಸಿಗುವುದು. ಕೆಲವರಿಗೆ ಸರ್ವ ಸಂಬಂಧದಲ್ಲಿ ಬರುವ ವರದಾನ ಸಿಗುತ್ತದೆ, ಕೆಲವರಿಗೆ ಯಾವುದೇ ಸಮಸ್ಯೆ ಬರಲಿ ಅದನ್ನು ಎದುರಿಸುವ ಶಕ್ತಿಯ ವರದಾನ ಸಿಗುತ್ತದೆ. ಪ್ರತಿಯೊಬ್ಬರಿಗೂ ತಮ್ಮ ತಮ್ಮ ವರದಾನವೂ ಸಿಕ್ಕಿದೆ. ಆದರೆ ಜೊತೆಗೆ ಉಡುಗೊರೆಯೂ

ಸಿಕ್ಕಿದೆ. ಒಬ್ಬೊಬ್ಬರೊಳಗೆ ನೋಡಿದರೆ ಸರ್ವಶಕ್ತಿಗಳಲ್ಲಿ ಒಂದು ಶ್ರೇಷ್ಠ ಶಕ್ತಿ ವರದಾನದ ರೂಪದಲ್ಲಿ ಸಿಕ್ಕಿದೆ, ಅದಕ್ಕಾಗಿ ಪರಿಶ್ರಮ ಪಡಬೇಕಾಗಿಲ್ಲ, ಸಹಜ ಪ್ರಾಪ್ತಿಯಾಯಿತು. ಪರಸ್ಪರರ ಸಂಪರ್ಕದಲ್ಲಿ ಬರುವಾಗ ಅನುಭವವಾಗುತ್ತದೆ. ಒಬ್ಬೊಬ್ಬರ ಗುಣಗಳ ವರ್ಣನೆ ಮಾಡುವಾಗ ಪ್ರತಿಯೊಬ್ಬರ ವರದಾನದ ಬಗೆಗೂ ಗೊತ್ತಾಗುತ್ತದೆ. ಆದರೆ ವ್ಯಕ್ತಿಗತ ಕಾಣಿಕೆಯ ಬಗೆಗೆ ವಿಶೇಷ ಸ್ನೇಹವಿರುತ್ತದೆ. ಅದು ಯಾವ ಕಾಣಿಕೆ? ಇದನ್ನು ಯೋಚಿಸಿ ಮತ್ತು ಇನ್ನೊಂದು, ವ್ಯಕ್ತಿಗತ ಕಾಣಿಕೆಯನ್ನು ಸದಾ ಕಾಯಂ ಇಟ್ಟುಕೊಳ್ಳಲು ವಿಶೇಷ ಯಾವ ಮಾತಿನ ಬಗೆಗೆ ಗಮನವಿಟ್ಟುಕೊಳ್ಳುವ ಅವಶ್ಯಕತೆಯಿದೆ ಎಂದು ಯೋಚಿಸಿ, ಅಮೃತ ವೇಳೆ ಇದರ ಬಗೆಗೆ ವಿಚಾರ ಸಾಗರ ಮಂಥನ ಮಾಡಿ.

ನೆನಪಿನ ಯಾತ್ರೆಯಿಂದ ಆತ್ಮನಲ್ಲಿ ಸಂಕಲ್ಪಶಕ್ತಿ ಬರುತ್ತದೆ. ಎಷ್ಟೆಷ್ಟು ಇಚ್ಛಾಶಕ್ತಿಯನ್ನು ಧಾರಣೆ ಮಾಡುವಿರೋ ಅಷ್ಟು ಬುದ್ಧಿಯನ್ನು ಎಲ್ಲಿ ಬೇಕೋ, ಎಷ್ಟು ಸಮಯ ಬೇಕೋ ಅಷ್ಟು ನಿಲ್ಲಿಸಬಹುದು. ಇಚ್ಛಾಶಕ್ತಿ ಹೇಗೆ ಬರುತ್ತದೆ? ವಿಲ್ (ಸಮರ್ಪಣೆ) ಮಾಡುವುದರಿಂದ. ವಿಲ್ ಮಾಡುವ ಲಕ್ಷಣವನ್ನು ತಮ್ಮ ಎಲ್ ಪಾವರ್ ನಿಂದ ತಿಳಿದುಕೊಳ್ಳಬಹುದು. ಸರ್ವಶಕ್ತಿಗಳನ್ನು ವಿಲ್ ಮಾಡಿದರೆ ತಂದೆ ಸರ್ವ ಶಕ್ತಿಗಳನ್ನು ವಿಲ್ ಮಾಡುತ್ತಾರೆ. ಸರ್ವಶಕ್ತಿವಂತ ಜೊತೆಗಾರನಾದ ಮತ್ತು ಸರ್ವಶಕ್ತಿಗಳು ಜೊತೆಗಿವೆ' ಎಂದಾಗ ವಿಜಯವೇ ವಿಜಯ, 'ಹೇ ಭಗವಂತನೇ ನಿನ್ನ ಕಾರ್ಯ ನೀನೇ ತಿಳಿದವನು" ಎಂದು ಭಕ್ತಿಮಾರ್ಗದಲ್ಲಿಯೂ ಯಾವುದೇ ಕಾರ್ಯ ಮಾಡುವಾಗ ಪೂರ್ಣವಾಗುತ್ತದೆಯೋ ಇಲ್ಲವೋ ಎಂದು ತಿಳಿದು ಭಗವಂತನ ಮೇಲೆ ಬಿಡುತ್ತಾರೆ. ಆದ್ದರಿಂದ ಈ ಭಕ್ತಿಮಾರ್ಗದ ಸಂಸ್ಕಾರವನ್ನು ಈಗ ಪ್ರಾಕ್ಟಿಕಲ್ ಮಾಡಿದ್ದೀರಿ. ಭಕ್ತಿಮಾರ್ಗದಲ್ಲಿ ಕೇವಲ ಹೇಳಲು ಇತ್ತು, ಇಲ್ಲಿ ಜ್ಞಾನಮಾರ್ಗದಲ್ಲಿ ಮಾಡಿದಿರಿ, ಜ್ಞಾನಮಾರ್ಗದಲ್ಲಿ ಪಡೆಯುವ ಶಕ್ತಿ, ಭಕ್ತಿಮಾರ್ಗದಲ್ಲಿ ಪಡೆಯುವ ಶಕ್ತಿಯಲ್ಲಿ ಹಗಲು ರಾತ್ರಿಯ ಅಂತರವಿದೆ. ಒಳ್ಳೆಯದು.

ಅವ್ಯಕ್ತ ಮುರಳಿ 08-06-1971.

***ಜೀವನಕ್ಕೆ ಮೂರು ವಸ್ತುಗಳ ಅವಶ್ಯಕತೆ - ಪೌಷ್ಟಿಕ ಆಹಾರ, ಖುಷಿ ಮತ್ತು ಧನದ ಖಜಾನೆ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪೌಷ್ಟಿಕ ಆಹಾರ, ಖುಷಿ(ಸಂತೋಷ) ಮತ್ತು ಖಜಾನೆಯಿಂದ(ಧನ) ಸಂಪನ್ನವಾಗಿ ಇದ್ದೇನೆ.

2. ನಾನು ಸಹಜ ರೀತಿಯಲ್ಲಿ ಎಲ್ಲಾ ಖಜಾನೆಗಳನ್ನು ಅರ್ಥಾತ್ ಸಾಗರವನ್ನು ಮಡಕೆಯಲ್ಲಿ ಸಮಾವೇಶಗೊಳಿಸಿ ತೋರಿಸಿದ್ದೇನೆ.

3. ನಾನು ನೆನಪಿನ ಯಾತ್ರೆಯಲ್ಲಿರುವ ಸರ್ವಶಕ್ತಿಗಳ ಪ್ರಾಪ್ತಿ ಸ್ವರೂಪ.